"ಅಲ್ಲಿಂದ ಗುಂಡು ಹಾರಿಸಿ ಕೊಲ್ಲಲು ಯೋಜನೆ ಹಾಕಿದ. ಅದಕ್ಕಾಗಿ ರೂಮು ಬಾಡಿಗೆಗೆ ಪಡೆದ. ಈ ಭಾನುವಾರ ಅವಕಾಶ ಬಂತು! ಜೊತೆಗೆ, ಆತ ಅವಸರಿಸಲು ಒಂದು ಕಾರಣವೂ ಇತ್ತು. ಸಿಸಿಟೀವಿ! ಸೋಮಯ್ಯ ಈಗಾಗಲೇ ಮುಂಗಡ ನೀಡಿದ್ರೂ, ಸಿಸಿಟೀವಿಯವನು ಯಾಕೆ ಹಾಕಲಿಲ್ಲ ಅಂತ ವಿಚಾರಿಸಿದಾಗ ಆತ ಒಂದು ವಿಚಿತ್ರ ಸಂಗತಿ ತಿಳಿಸಿದ... ಸದ್ಯಕ್ಕೆ ಹಾಕುವುದು ಬೇಡ ಅಂತ ಸೋಮಯ್ಯನೇ ಹೇಳಿದ್ದನಂತೆ. ಪುಣ್ಯವಶಾತ್, ಆ ಸಿಸಿಟೀವಿಯವನ ಮೊಬೈಲಿನಲ್ಲಿ ಆ ಕರೆ ವಿವರ ಲಭ್ಯವಿತ್ತು. ಅದು ಸೋಮಯ್ಯನ ಸ್ಥಿರ ದೂರವಾಣಿಯಿಂದ, ಬೆಳಿಗ್ಗೆ ಹನ್ನೊಂದೂವರೆಯ ಹೊತ್ತಿಗೆ ಬಂದಿದ್ದು. ಆ ದಿವಸ ಆ ಹೊತ್ತಿಗೆ ಸೋಮಯ್ಯ ಕೋರ್ಟಿನಲ್ಲೇ ಇದ್ದಿದ್ದಕ್ಕೆ ನನ್ನಲ್ಲಿ ಸಾಕ್ಷಿಯಿದೆ... ಆತ ಅಂದು ಒಂದು ಪಾಟೀ ಸವಾಲು ನಡೆಸಿದ್ದ! ಅಲ್ಲಿಗೆ ಕರೆ ಮಾಡಿದ್ದು ಉತ್ತಯ್ಯ ಅಂತ ಭಾವಿಸಿದೆ."

"ಇನ್ನೊಂದು ಅನುಮಾನ... ಉತ್ತಯ್ಯ ಚಂದ್ರಕುಮಾರನಿಗೆ ಸೋಮಯ್ಯನಂತೆ ನಟಿಸಲು ಯಾಕೆ ಹೇಳಿದ?"

"ಅದನ್ನು ಹೀಗೆ ತರ್ಕಿಸಬಹುದು. ಬೆಟ್ಟಪ್ಪ ಹೋದ ತಕ್ಷಣ ಉತ್ತಯ್ಯ ಸೋಮಯ್ಯನನ್ನು ಕೊಲ್ಲುವ ಯೋಜನೆ ಹಾಕ್ತಾನೆ. ನಂತ್ರ ಬರುವ ಪಾಲಯ್ಯನಿಗೆ ಹೇಗೂ ಸೋಮಯ್ಯನ ಪರಿಚಯವಿಲ್ಲ. ನಕಲಿ ಸೋಮಯ್ಯ ಇದ್ದರೆ, ಅದು ತನಿಖೆಯ ದಾರಿ ತಪ್ಪಿಸುತ್ತೆ. ಆಗ ಪಾಲಯ್ಯನ ಮೇಲೂ ಅನುಮಾನ ಬರಬಹುದು! ಮತ್ತು ಕುರ್ಚಿಗೆ ಹಾಕಿದ ಕ್ಲಾಂಪ್ ತೆಗೆಯಲು, ಫೈಲು ಡಿಲೀಟ್ ಮಾಡ್ಲು ಜನ ಬೇಕಲ್ಲ. ಅದ್ಕೆ ಚಂದ್ರಕುಮಾರ. ಆದ್ರೆ ಪಾಲಯ್ಯ ಬರುವಾಗ ತಡವಾಯ್ತಲ್ಲ. ಅದಿಕ್ಕೇ ಚಂದ್ರಕುಮಾರ ಆತನ ಹತ್ತಿರ ಹೆಚ್ಚು ಮಾತಾಡಲಿಲ್ಲ ಯಾಕಂದ್ರೆ ನಂತ್ರ ರುದ್ರಮುನಿ ಬಂದರೆ ಆತನ ಗುಟ್ಟು ರಟ್ಟಾಗುತ್ತೆ ಅಂತ..."

"ಚಂದ್ರಕುಮಾರ್ ಒಳಗೆ ಬರುವಾಗ, ಪಾಗಾರ ಏರಿ ಬಂದವನು ಹೋಗುವಾಗಲೂ ಯಾಕೆ ಹಾಗೆ ಹೋಗಿಲ್ಲ?"

"ಎರಡು ಕಾರಣ... ಏರುವುದು ಸುಲಭ, ಪುನಃ ವಾಪಸು ಪಾಗಾರದಲ್ಲಿರಿಸಿದ ಕಲ್ಲಿನ ಮೇಲೆ ಜಿಗಿಯುವುದು ಕಠಿಣ. ಇನ್ನೊಂದು, ಯಾರಾದರೂ ಕಂಡರೆ ಎಂಬ ಭಯ."

"ಕೊಲೆಯ ಉದ್ದೇಶ?"

"ಚಂದ್ರಕುಮಾರನ ಪರವಾಗಿ ಮಾಡಿದ್ದಾನೆ. ಅಷ್ಟಿಂದ ಭಾರೀ ಮೊತ್ತ ಪಡೆದಿರಬಹುದು. ನೀವು ಅದನ್ನು ತನಿಖೆ ಮಾಡಿ... ಈ ಬಡಪಾಯಿಯನ್ನು ಮೊದಲು ಬಿಡಿ. ಆತ ಈ ಪ್ರಕರಣದಲ್ಲಿ ನಿರಪರಾಧಿ!"

ಡಿಸೋಜ ಮರು ಮಾತಾಡದೆ ಕರಮಚಂದನ ಮಾತನ್ನು ಪಾಲಿಸಿದ.

**ರವಿರಾಜ ಬೈಕಂಪಾಡಿ**

ಮಂಗಳೂರಿನಲ್ಲಿ ಲೆಕ್ಕಪರಿಶೋಧಕರಾಗಿರುವ ರವಿರಾಜ ಅವರ ಮೊದಲ ಪತ್ತೆದಾರಿ ಕತೆ 'ಭವಿಷ್ಯ' ಪ್ರಕಟವಾಗಿದ್ದು 'ಸುಧಾ' ವಾರಪತ್ರಿಕೆಯಲ್ಲಿ. ಪತ್ತೆದಾರಿ ಕಿರುಕಾದಂಬರಿ 'ಅದಲು–ಬದಲು' ವಾರಪತ್ರಿಕೆಯೊಂದರಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿದೆ. ವಿವಿಧ ಪತ್ರಿಕೆಗಳಲ್ಲಿ ಕತೆ–ನೀಳ್ಗತೆಗಳೂ ಪ್ರಕಟಗೊಂಡಿವೆ. ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್‌ನಲ್ಲಿ ವಾಸವಾಗಿದ್ದಾರೆ.